ನನಗೇನೂ ದುಃಖವಿಲ್ಲ. ಗಂಡನ ಜೊತೆ ಮಲಗಿ ಮುಗಿಬಿದ್ದಾಗಲೂ ನೀನೇ ತಬ್ಬಿಕೊಂಡಿದ್ದೀಯಾ, ಮುದ್ದಿಸುತ್ತಿದ್ದೀಯಾ ಎಂದೆಲ್ಲಾ ಭ್ರಮಿಸುತ್ತಲೇ ಎರಡು ಮಕ್ಕಳ ತಾಯಿಯಾದ ಪತಿವ್ರತೆ ನಾನು. ಈ ಪತ್ರಾವಾಳಿ ಪ್ರಪಂಚದಲ್ಲಿ ಯಾರೂ ಶ್ರೀರಾಮಚಂದ್ರನಲ್ಲ–ಸೀತೆಯೂ ಅಲ್ಲ. ಕನಸಿನಲ್ಲಾದರೂ ಬಯಸಿದ ಪಕ್ಕದ ಮನೆ ಹುಡುಗ ಹುಡುಗಿಯೊಂದಿಗೋ, ಕಾಲೇಜ್ ಸಹಪಾಠಿಯೊಂದಿಗೋ, ಸಹೋದ್ಯೋಗಿಯೊಂದಿಗೋ, ರಾತ್ರಿ ಕನಸಲ್ಲಿ ಮಲಗೆದ್ದಿರುತ್ತಾರೆ. ಯೌವನದ ದಿನಗಳಲ್ಲಿ, ಕ್ಷಣಗಳಲ್ಲಿ ಅದೇನೂ ತಪ್ಪಲ್ಲ ಬಿಡು. ಸಂಸಾರಸ್ಥರಾಗಿಯೂ ಬೇರೆ ಸಂಬಂಧಗಳನ್ನಿಟ್ಟುಕೊಂಡು ದಿನವೂ ಭಯದಿಂದ ನಾಟಕವಾಡುತ್ತಾ ಬದುಕುವುದಕ್ಕಿಂತ ಎಷ್ಟೋ ವಾಸಿ. ನಮ್ಮಂತಹ ದೊಡ್ಡವರ ಮನೆ ಬದುಕು ಭಾರಿ ಕಷ್ಟ ಕಣೋ. ಎಲ್ಲಿ ಟೀವಿ ಚಾನಲ್‌ಗಳಿಗೆ ಬ್ರೇಕಿಂಗ್ ನ್ಯೂಸೋ, ವಾರೆಂಟೋ ಆಗುತ್ತೇವೆಂಬ ಭಯ.

★★★

ನಾನೇನು ಸಿರಿವಂತಳಾಗಿರಲಿಲ್ಲವಾದರೂ ನಿನ್ನಷ್ಟು ಬಡಪಾಯಿಯಾಗಿರಲಿಲ್ಲ. ನನ್ನ ಬರ್ತಡೇಗೆ ಐಸ್‌ಕ್ರಿಮ್ ಕೊಡಿಸಲು ನೀನೆಷ್ಟು ಪರದಾಡುತ್ತಿದ್ದೆಯೆಂದು ಊಹಿಸಬಲ್ಲೆ. ಅದೆಷ್ಟೋ ಸಲ ನನಗೆ ಮಸಾಲೆದೋಸೆ ಕೊಡಿಸಿ, ನೀನು ಮಾತ್ರ ಕಾಫಿ ತಗೋತಿದ್ದದ್ದು ಡಯಟ್‌ಗಾಗಿ ಅಲ್ಲ. ಜೇಬಲ್ಲಿ ಕಾಸಿಲ್ಲವೆಂದೂ ಗೊತ್ತಿದ್ದೂ ನಿನ್ನಿಂದ ಖರ್ಚು ಮಾಡಿಸುವುದು ನನ್ನ ಹಕ್ಕೆಂಬಂತೆ ವರ್ತಿಸುತ್ತಿದ್ದೆ. ಅದು ನನ್ನ ಅಹಂ ಆದರೂ ಐಸ್‌ಕ್ರೀಮ್ ತಿಂದಾಗಿನ ಖುಷಿ ಬಂದೀತೆ? ನಿನ್ನೊಡನೆ ಕಳೆದ ಒಂದೊಂದು ಕ್ಷಣಗಳೂ ನನ್ನ ಪಾಲಿನ ಭಾವಗೀತೆ. ಆ ಭಾವಗೀತೆಗಳೂ ಬೋರ್ ಹೊಡಿಸಿದವೆಂದು ಜೇಬಲ್ಲಿ ಕಾಸಿರುವವನನ್ನು ಕಟ್ಟಿಕೊಂಡೆ. ಬಾಳೇ ಖಾಲಿಯಂತಾದ ಅನುಭವ ಕಣೋ ಈಗ. ನೀನೇನೇ ಅನ್ನು, ಹಸಿಹಸಿ ಅನುಭವಕ್ಕಾದರೂ ಪ್ರೀತಿಸಬೇಕು ಕಣೋ. ಏಕೆಂದರೆ, ಪ್ರೀತಿಗೆಂದೂ ಸಾವಿಲ್ಲ. ಅದರ ನೆನಪುಗಳೇ ಮಧುರ–ಅಮರ. ಸಾಮಾನ್ಯವಾಗಿ ಪ್ರೇಮಿಗಳ ಪಾಲಿಗೆ ತಂದೆ ತಾಯಿಗಳೇ ಫಸ್ಟ್ ವಿಲನ್ಸ್. ನಮ್ಮ ಪ್ರಕರಣದಲ್ಲಿ ಹಾಗಾಗಲೇ ಇಲ್ಲ. ನಿನ್ನನ್ನೇ ಮದುವೆಯಾಗಿದ್ದರೂ ಅಡ್ಡಗಾಲು ಹಾಕುವವರಿರಲಿಲ್ಲ. ಆದರೆ, ಜೀವನವನ್ನು ಪ್ರಾಕ್ಟಿಕಲ್ ಆಗಿ ತೆಗೆದುಕೊಳ್ಳುವ, ಬದಲಾವಣೆ ಜಗದ ನಿಯಮವೆಂದುಕೊಂಡವಳಾದ ನಾನು, ಬಡತನದ ಅಲರ್ಜಿಯಿಂದ ದೂರವಾಗಲೆಂದೇ ನಿನ್ನಿಂದ ದೂರಸರಿದೆನಯ್ಯ. ನಾನು ಉಟ್ಟು, ತೊಟ್ಟು, ಉಂಡು, ಮೇಕಪ್ಪಾಗಿ ಮನೆಯಿಂದ ಬರ್ತಿದ್ದೆ. ನೀನೂ ಅಷ್ಟೆ, ಅಪ್ಪನ

